

# ಗ್ಯಾಲರಿ ಒಳಗಿನ ಬದುಕು

■ ಗೌರಿ

**ಬದುಕಿನ ಪುನರಾವರ್ತನೆಯನ್ನು ಒಂದು ವಿಚಿತ್ರ ಆಡಿಷನ್ ಪ್ರಕ್ರಿಯೆಯ ಮೂಲಕ ಬಿಂಬಿಸುವ ಕಿರುಚಿತ್ರ 'ದಿ ಗ್ಯಾಲರಿ'. ಕುತೂಹಲ, ಆತಂಕ, ಚಡಪಡಿಕೆ ಎಲ್ಲವನ್ನೂ ಕಾಣಿಸುವ, ಕೊನೆಯಲ್ಲೊಂದು ನಗೆಯ ಬುಗ್ಗೆಯನ್ನು ಉಕ್ಕಿಸುವ ಭಾವಾಭಿವ್ಯಕ್ತಿಯ ಗ್ಯಾಲರಿ ಇದು.**

ಪುನರಾವರ್ತನೆ ಎನ್ನುವುದು ಬದುಕಿನ ಎಲ್ಲ ಸ್ತರಗಳಲ್ಲಿಯೂ ನಾವು ನೋಡುತ್ತಲೇ ಇರುವ, ಅನುಸರಿಸುವ ಸಂಗತಿ. ಹಾಗೆ ನೋಡಿದರೆ ನಮ್ಮ ಬದುಕಿನ ಬಹುಪಾಲು ದಿನಗಳು ಒಂದರಂತೆಯೇ ಇನ್ನೊಂದು ಇರುತ್ತದೆ. ಒಂದರ ಛಾಯಾಪ್ರತಿಯೇ ಆಗಿ ಮತ್ತೊಂದು ಕಾಣುತ್ತಿರುತ್ತದೆ. ಊಟ, ನಿದ್ದೆ, ವಿರಾಮಗಳಷ್ಟೇ ಅಲ್ಲ, ಕೆಲಸ, ಮಾತು, ಸ್ಪಂದನಗಳಲ್ಲಿಯೂ ಪುನರಾವರ್ತನೆಯನ್ನು ನೋಡುತ್ತಲೇ ಇರುತ್ತೇವೆ. ಒಂದು ವಿಚಿತ್ರವೂ ತುಸು ನಿಗೂಢವೂ ಅನಿಸುವ ಸನ್ನಿವೇಶದ ಮೂಲಕ ಈ ಪುನರಾವರ್ತನೆಯ ಚಕ್ರವನ್ನು ನಮಗೇ ಕಾಣಿಸುವ ಕಿರುಚಿತ್ರ 'ದಿ ಗ್ಯಾಲರಿ'.

ಮಾಯಾ ಒಂದು ಆಡಿಷನ್‌ಗೆ ಬಂದಿದ್ದಾಳೆ. ಆಡಿಷನ್ ರೂಮಿನೊಳಗೆ ಒಬ್ಬ ವಯಸ್ಸಾದ ಮುದುಕನಿದ್ದಾನೆ. ಅವಳನ್ನು ಬರಮಾಡಿಕೊಳ್ಳುವ ಮುದುಕ, ಗೋಡೆಯ ಮೇಲಿನ ಓರ್ವ ವ್ಯಕ್ತಿಯ ಚಿತ್ರದ ಬಳಿ ಅವಳನ್ನು ಕರೆದೊಯ್ಯುತ್ತಾನೆ. 'ಈ ಗೋಡೆಯ ಹಿಂದೊಂದು ಕೋಣೆಯಿದೆ. ಆ ಕೋಣೆಯಲ್ಲಿ ಕೂತು ಚಿತ್ರದ ಮೂಲಕ ನಾನು ಈ ರೂಮಿನಲ್ಲಿ ನಡೆಯುತ್ತಿರುವ ಎಲ್ಲವನ್ನೂ ನೋಡುತ್ತೇನೆ. ಎಲ್ಲವನ್ನೂ ಕೇಳಿಸಿಕೊಳ್ಳುತ್ತೇನೆ. ಇನ್ನು ಮೇಲೆ ಈ ಕೊಠಡಿ ನಿನ್ನದು. ನಿನಗೆ ಸ್ವಲ್ಪೇ ಸ್ವಲ್ಪ ಸಮಯಾವಕಾಶವಿದೆ. ಅಷ್ಟರಲ್ಲಿ ನಿನ್ನ ಅಭಿನಯ ಪ್ರತಿಭೆಯನ್ನು ತೋರಿಸಬೇಕು. ಟೇಬಲ್ ಮೇಲೆ ಸ್ಕ್ರಿಪ್ಟ್ ಇದೆ. ಅದನ್ನು ಓದು. ಸ್ವಲ್ಪ ಸಮಯದಲ್ಲಿ ನೀನು ಇನ್ನೊಬ್ಬ ಕಲಾವಿದನ ಎದುರಿಗೆ ಅದನ್ನು ಅಭಿನಯಿಸಿ ತೋರಿಸಬೇಕು' ಎಂದು ಹೇಳಿ ಕೋಣೆಯ ಬಾಗಿಲು ಹಾಕಿಕೊಂಡು ಹೊರಗೆ ಹೋಗುತ್ತಾನೆ. ಆ ಕ್ಷಣದಲ್ಲಿ ಮಾಯಾಗೆ ಟೆನ್ಷನ್ ಆಗುತ್ತದೆ. ಗೋಡೆ ಮೇಲಿನ ವ್ಯಕ್ತಿಯ ಫೋಟೊ ಹಿಂದಿನಿಂದ ಯಾರೋ ತನ್ನನ್ನು ನೋಡುತ್ತಿದ್ದಾರೆ ಎಂಬ ಸಂಗತಿಯಿಂದ ಅವಳು ಅಸ್ವಸ್ಥಳಾಗುತ್ತಾಳೆ. ಚಡಪಡಿಕೆಯಿಂದ ಅತ್ತಿತ್ತ ಓಡಾಡಿ ಸ್ಕ್ರಿಪ್ಟ್ ಓದಲು ಕೂಡುತ್ತಾಳೆ. ತುಸುಹೊತ್ತಿಗೆ ಇನ್ನೊಬ್ಬ ವ್ಯಕ್ತಿ ರೂಮಿನ ಬಾಗಿಲು ದೂಡಿಕೊಂಡು 'ನಾನು ಆಡಿಷನ್‌ಗೆ ಬಂದಿದ್ದೇನೆ' ಎಂದು ಒಳಗೆ ಬರುತ್ತಾನೆ.



**ಹೆಸರು:** ದಿ ಗ್ಯಾಲರಿ
**ನಿರ್ದೇಶನ:** ಆ್ಯಂಟೋನಿ ಇಂಗ್
**ನಿರ್ಮಾಣ:** ಕ್ಯಾಥೆರಿನ್ ಬ್ರೇ, ಚಾರ್ಲಿ ಲೈನ್
**ಛಾಯಾಗ್ರಹಣ:** ಟ್ಯಾನ್ಸಿ ಸಿಂಪ್ಸನ್
**ಸಂಕಲನ:** ಶಶಿಕುಮಾರ್
**ಧ್ವನಿ:** ಪಿಯಾಟ್ರೊ ಗಿಯೊಡಾನೋ, ಸ್ಯಾಯುಲ್ ರಿವರ್ಸ್
**ತಾರಾಗಣ:** ಮೈಖಲ್ ಆಕಿನ್‌ಸುಲೈಯರ್, ಡಯಾನಾ ಬರ್ಮುಡೈಸ್

ಮಾಯಾ ಆ ರೂಮಿನೊಳಗೆ ಬಂದಾಗ ಮುದುಕ ಕೂತಿದ್ದ ಜಾಗದಲ್ಲಿ ಈಗ ಸ್ವತಃ ಮಾಯಾಳೇ ಕೂತಿದ್ದಾಳೆ! ಈಗ ಒಳಗೆ ಬಂದ ವ್ಯಕ್ತಿ ಮಾಯಾಳೇ ತನ್ನ ಆಡಿಷನ್ ತೆಗೆದುಕೊಳ್ಳಲಿದ್ದಾಳೆ ಎಂದು ಭಾವಿಸಿ ಮಾತಿಗೆ ತೊಡಗಿದ್ದಾನೆ. ಮಾಯಾ ತಾನೇ ಆಡಿಷನ್ ತೆಗೆದುಕೊಳ್ಳಲಿರುವವಳಂತೆ, ತನ್ನೊಂದಿಗೆ ಆ ಮುದುಕ ಹೇಗೆಲ್ಲ ಮಾತಾಡಿದ್ದನೋ ಅದನ್ನೇ ತನ್ನೆದುರಿನ ಇನ್ನೊಬ್ಬನ ಎದುರಿಗೂ ಮಾತಾಡಲು ಶುರುಮಾಡುತ್ತಾಳೆ.

ನೇರವಾಗಿ ಏನನ್ನೂ ಹೇಳುತ್ತಿಲ್ಲವೆಂಬಂತೆ ತೋರುವ ಈ ಕಿರುಚಿತ್ರ ತನ್ನ ಆ್ಯಕ್ಟ್‌ನಲ್ಲಿಯೇ ಹಲವು ಹೊಳಹುಗಳನ್ನು ಹುಟ್ಟಿಸುತ್ತದೆ. ಒಂದೇ ಪರಿಸ್ಥಿತಿಗೆ ಇರುವ ಹಲವು ಆಯಾಮಗಳು, ಯಾರೋ ತಮ್ಮನ್ನು ವೀಕ್ಷಿಸುತ್ತಿದ್ದಾರೆ ಎಂಬುದರ ಅರಿವು ಹುಟ್ಟಿಸುವ ಆತಂಕ, ಟೆನ್ಶನ್ ಎಲ್ಲವನ್ನೂ ಈ ಕಿರುಚಿತ್ರ ಕಟ್ಟಿಕೊಡುತ್ತದೆ. ಹಾಗೆಯೇ ನಮ್ಮ ಎಷ್ಟೋ ಆತಂಕದ ತುದಿಯಲ್ಲಿ ಏನೂ ಇಲ್ಲದಿರುವುದನ್ನೂ, ಹಾಗಾಗಿ ನಮ್ಮ ಆತಂಕವೂ ಕೃತಕವಾಗಿಬಿಡುವ, ಅದು ಇನ್ಯಾರಿಗೋ ಮನರಂಜನೆಯಾಗಿಬಿಡುವ ಸಾಧ್ಯತೆಗಳನ್ನೂ ಇದು ತೆರೆದಿಡುತ್ತದೆ. ತಾನೊಂದು ಚಕ್ರದ ಭಾಗವಾಗಿದ್ದೇನೆ ಎಂಬ ಅರಿವು ಮಾಯಾಳಿಗೆ ಹುಟ್ಟುವ ಸಂದರ್ಭ ನೋಡುವವರ ಮುಖದಲ್ಲಿ ನಗೆಯನ್ನು ಮೂಡಿಸುತ್ತದೆ.

ಒಂಬತ್ತು ನಿಮಿಷಗಳ ಈ ಕಿರುಚಿತ್ರ ಸ್ಪಷ್ಟವಾಗಿ ಏನನ್ನೂ ಹೇಳುವುದಿಲ್ಲ. ಬದಲಿಗೆ ಒಂದು ವಿಚಿತ್ರ ಸನ್ನಿವೇಶವನ್ನು ಬಹುಗಟ್ಟಿಯಾಗಿ ಕಟ್ಟಿಕೊಡುವ ಮೂಲಕ ನಮ್ಮೊಳಗೇ ಹಲವು ಸಾಧ್ಯತೆಗಳನ್ನು ತೆರೆದಿಡುವ ತಂತ್ರವನ್ನು ಅನುಸರಿಸಿದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/3b3gFyn ಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.